ಅಸಲು ದಾವಾ ನಂ.55/2017
ಡಿ.ಡಬ್ಲ್ಯು-12

ದಿನಾಂಕಃ 11-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ- ವಾದಿ ಪರ ಶ್ರೀ . ಎನ್ ಆರ್ ಬಿ ವಕೀಲರಿಂದ.

ನಾನು ಶಾಲೆ ಕಲಿತಿಲ್ಲ. ವಾದಿಯರು ಈ ದಾವೆಯಲ್ಲಿ ಏನು ಪರಿಹಾರ ಕೋರಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿ ಸರ್ವೇ ನಂ.164, ಕ್ಷೇತ್ರ 5 ಎಕರೆ 17 ಗುಂಟೆ ಎಂದರೆ ಸರಿ. ಅದರಲ್ಲಿ 3 ಎಕರೆ 13 ಗುಂಟೆ ಮಾತ್ರ ದಾವಾ ಸ್ವತ್ತು ಎಂದರೆ ಸರಿ. ವಾದಿಯ ಗಂಡ ವಿನಾಯಕರಾವ್ ಇವರಿಗೆ ದತ್ತಾತ್ರೇಯ ಮತ್ತು ಗುರುರಾವ್ ಎಂಬ ಸಹೋದರರು ಎಂದರೆ ಸರಿ. ಗುರುರಾವ್ ಕುಲಕರ್ಣಿ ಇವರಿಗೆ 27 ಗುಂಟೆ ಜಮೀನು, ದತ್ತಾತ್ರೇಯ ಇವರಿಗೆ 26 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಯ ಗಂಡ ವಿನಾಯಕರಾವ್ ಇವರಿಗೆ 3 ಎಕರೆ 13 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ವಿನಾಯಕರಾವ್ ಕುಲಕರ್ಣಿ ಹಾಗೂ ಆತನ ಸಹೋದರರ ನಡುವೆ ವಾಟ್ನಿ ಆದ ಬಗ್ಗೆ ಹಕ್ಕು ಬದಲಾವಣೆ ಸಂಖ್ಯೆ 2200 ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯರು ಮತ್ತು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ಸಾಗುವಳಿ ಮಾಡುವ ವಿಷಯ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಯಾವ ಸಂಗತಿ ಬರೆದಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಜಮೀನು ನಿವೇಶನದ ಸಲುವಾಗಿ ಭೂ ಪರಿವರ್ತನೆ ಆದ ವಿಷಯ ನನಗೆ ಗೊತ್ತಿಲ್ಲ. ನಾನು ದಾವಾ ಜಮೀನನ್ನು ಯಾವ ದಿನಾಂಕದಂದು ಖರೀದಿ ಪಡೆದುಕೊಂಡಿರುತ್ತೇನೆ ಎಂದು ಗೊತ್ತಿಲ್ಲ. ನಾನು ಯಾವ ನಂಬರದ ಪ್ಲಾಟ್ ನ್ನು ಖರೀದಿ ಹಿಡಿದಿರುತ್ತೇನೆ ಎಂದು ಗೊತ್ತಿಲ್ಲ. ಖರೀದಿ ಪತ್ರದಲ್ಲಿ ಏನು ಬರೆದಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಖರೀದಿ ಹಿಡಿಯುವಾಗ ವಾದಿ ನಂ.2 ಮತ್ತು 3, ಪ್ರತಿವಾದಿ ನಂ.1 ಪ್ರಾಪ್ತ ವಯಸ್ಕರು ಇದ್ದರು ಎಂದರೆ ಸರಿ. ಖರೀದಿ ಸಂದರ್ಭದಲ್ಲಿ ವಾದಿ ನಂ.2 ಮತ್ತು 3, ಪ್ರತಿವಾದಿ ನಂ.1 ಇವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ.

2. ಈ ದಾವೆಯಲ್ಲಿ ವಾದಿಯರು ಕೆಲವೊಂದು ಆಸ್ತಿಗಳನ್ನು ಸೇರ್ಪಡೆ ಮಾಡಿಲ್ಲ ಎಂದು ಹೇಳಿದ್ದು, ಹಾಗೇ ಯಾವ ನಂಬರದ ಆಸ್ತಿಗಳನ್ನು ಸೇರ್ಪಡೆ ಮಾಡಿಲ್ಲ ಎಂದು ಹೇಳಲು ಬರುವುದಿಲ್ಲ. ಪ್ಲಾಟುಗಳನ್ನು ಖರೀದಿ ಹಿಡಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಹೇಳಿದ್ದು, ಹಾಗೇ ಖರೀದಿ ಹಿಡಿದವರು ಯಾರು ಯಾರು ಎಂದು ಹೇಳಲು ಬರುವುದಿಲ್ಲ. ಹಾಗೇ ಖರೀದಿ ಹಿಡಿದವರ ಹೆಸರು ಬರೆಯಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಖರೀದಿ ಹಿಡಿದ ನಂತರ ನನ್ನ ಹೆಸರು ಪಹಣಿಯಲ್ಲಿ ನಮೂದು ಆಗಿಲ್ಲ. ಈಗಲೂ ಸಹ ಪಹಣಿಯಲ್ಲಿ ವಾದಿಯರು ಮತ್ತು 1 ನೇ ಪ್ರತಿವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. ವಾದಿಯರ ಹಕ್ಕು ನಷ್ಟ ಮಾಡುವ ಉದ್ದೇಶದಿಂದ ನಾನು ಅವರಿಗೆ ಗೊತ್ತಿಲ್ಲದಂತೆ ದಾವಾ ಆಸ್ತಿಯನ್ನು ಖರೀದಿ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).